ಊ) ಕಬ್ಬನ್ ಪಾರ್ಕಿನ ಆವರಣದಲ್ಲಿ ನೀರು ಶುದ್ಧೀಕರಣ ಘಟಕದ ಮುಖಾಂತರ ಪ್ರತಿ ದಿನ ಬಾಲಭವನದ ಗಿಡ ಲಾನ್ ಮುಂತಾದವುಗಳಿಗೆ ನೀರನ್ನು ಹಾಯಿಸಲಾಗುತ್ತಿದೆ

ಋ) ಪ್ರಸ್ತುತ, ಬಾಲಭವನದಲ್ಲಿರುವ ಏಕೈಕ ಬೋರ್ ವಲ್ ನಂದ ಸಾಕಷ್ಟು ನೀರು ಪಡೆಯುತ್ತಿದ್ದು, ಅಲ್ಲದೇ ಬೆಂಗಳೂರು ಜಲ ಮಂಡಳಿಯಿಂದಲೂ ನೀರಿನ ಸೌಲಭ್ಯ ವಿರುವುದರಿಂದ ಯಾವುದೇ ನೀರಿನ ತೊಂದರೆಯಾಗಿರುವುದಿಲ್ಲ

216 (249) ಶ್ರೀ ನಿರಾಣಿ ಮುರಗೇಶ್ ರುದ್ರಪ್ಪ (ಬೀಳಗಿ)

ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) 2006–07ನೇ ಸಾಲಿನಲ್ಲಿ ಬೀಳಗಿ ಮತಕ್ಷೇತ್ರದ ರೈತರಿಗೆ ನೀಡಲಾದ ಎತ್ತು ಮತ್ತು ಬಂಡಿಗಳ ಸಂಖ್ಯೆ ಎಷ್ಟು ,

ಆ) ಬಂಡಿಯನ್ನು ಖರೀಧಿಸಲು ಮಾನ ದಂಡವೇನು , ತಲಾ ಒಂದು ಬಂಡಿಗೆ ಸರ್ಕಾರದಿಂದ ನೀಡುತ್ತಿರುವ ಹಣವೆಷ್ಟು ,

ಇ) ಬಂಡಿಗಳನ್ನು ಟೆಂಡರ್ ಮೂಲಕ ಖರೀದಿಸುವುದನ್ನು ಕೈಬಿಟ್ಟು, ಆಯಾ ಪ್ರದೇಶಕ್ಕೆ ಹೊಂದುವ ಸ್ಥಳಿಯ ಬಂಡಿ ತಯಾರಿಕಾ ಬಡಿಗರ ಸಂಘದಿಂದ ಬಂಡಿ ಖರೀದಿಸಿದಲ್ಲಿ ಸ್ಥಳೀಯರ ಕೌಶಲ್ಯಕ್ಕೆ ಉತ್ತೇಜನ ನೀಡಲಾಗುವುದೇ,

ಈ) ಅತಿ ಹಿಂದುಳಿದ ಮತ್ತು ಯ ಕೆ ಪಿ ಸಂತ್ರಸ್ತ ಬೀಳಗಿ ತಾಲ್ಲೂಕಿಗೆ ವಿಶೇಷ ಸವಲತ್ತಿನ ಮೇಲೆ ಎತ್ತು ಬಂಡಿ ಒದಗಿಸುವ ಯೋಜನೆ ಸರ್ಕಾರಕ್ಕಿದೆಯೇ ?

ಶ್ರೀ ಬಂಡೆಪ್ಪ ಕಾಶಂಪೂರ

ಅ) ಎತ್ತುಗಳು–56 ಜೊತೆ, ಎತ್ತಿನ ಗಾಡಿ–65

ಆ) ಜಿಲ್ಲಾ ಮಟ್ಟದ ಕೃಷಿ ಉಪಕರಣ ಸಮಿತಿಯು ಟೆಂಡರ್ ಕರೆದು ಎತ್ತಿನ ಗಾಡಿಯ ದರವನ್ನು ನಿಗಧಿಪಡಿಸಿದ್ದು, ಪ್ರತಿ ಗಾಡಿಗೆ ಸರ್ಕಾರದ ವತಿಯಿಂದ ಗರಿಷ್ಠ 10,000 ರೂ ಗಳನ್ನು ಸಹಾಯಧನದ ರೂಪದಲ್ಲಿ ನೀಡಲಾಗಿರುತ್ತದೆ

ಇ) 2007–08ನೇ ಸಾಲಿನಲ್ಲಿ ಈ ಕಾರ್ಯಕ್ರಮವನ್ನು ಸೇರಿಸಿಲ್ಲದಿರುವುದರಿಂದ, ಈ ಪ್ರಶ್ನೆ ಉದ್ಭವಿಸುವುದಿಲ್ಲ

ಈ) ಇಲ್ಲ

219 555 ಶ್ರೀ ಪದ್ಮನಾಭ ಕೊಟ್ಟಾರಿ ಕೆ (ವಿಟ್ಲ)

ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಈ ವರ್ಷದ ಬಜೆಟ್‌ನಲ್ಲಿ 4% ಪಡೆದ ರೈತರ 25,000 ಸಾಲ ಮನ್ನಾ ಮಾಡಿದ ಸರ್ಕಾರ ಇದಕ್ಕಿಂತ ಮೊದಲು 25,000 ಸಾಲ ಪಡೆದ ರೈತರ ಸಾಲ ಮನ್ನಾ ಮಾಡದೇ ಇರಲು ಕಾರಣವೇನು ?

ಆ) ಈ ರೈತರಿಗೆ ಸರ್ಕಾರದ ಸಾಲ ಮನ್ನಾ ಯೋಜನೆಯ ಅನುಕೂಲತೆ ಲಭ್ಯವಾಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದಲ್ಲಿ, ಈ ರೈತರ ಹಿಂದಿನ ಸಾಲದಲ್ಲಿ ರೈತರ 25 000 ವರೆಗಿನ ಸಾಲ ಮನ್ನಾ ಮಾಡಲು ಸರ್ಕಾರ ಏನು ಕ್ರಮ ಕೈಗೊಂಡಿದೆ?